# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



With Your support we reach
100000
HAMPI TIMES E-PAPER VIEWS
PRINT & DIGITAL Advertisement
Valmiki Circle, Hosapete-583201
9448633038
hampitimes@gmail.com
www.hampitimes.com
epaper.hampitimes.com
Thank You



ಸಂಪುಟ:01 • ಸಂಚಿಕೆ:155 • ನೋಂದಣಿ ನಂ.:KARKAN27911 • ವಿಜಯನಗರ • 12.11.2023 • ಭಾನುವಾರ • ಪುಟ:04 • ಬೆಲೆ:2

Volume:01 • Issue:155 • Reg.No:KARKAN27911 • VIJAYANAGARA • 12.11.2023 • Sunday • Page:04 • Rs:2


## ಭಕ್ತರತ್ತ ಜಗದ್ಗುರುಗಳ ಪಾದಯಾತ್ರೆ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನ ಮಠದಲ್ಲಿ ನ.20 ರಿಂದ 23ರವರಗೆ ಪೂಜ್ಯ ನಿರಂಜನ ಜಗದ್ಗುರು ಡಾ.ಸಂಗನಬಸವ ಮಹಾಸ್ವಾಮಿಗಳವರ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸವಿನೆನಹಿನಲ್ಲಿ ಜರುಗಲಿರುವ ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗೆ ಸಮಸ್ತ ಭಕ್ತರು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ನಗರದ ವಿವಿದ ವಾರ್ಡ್‌ಗಳಲ್ಲಿ ಪಾದಯಾತ್ರೆ ತೆರಳಿ ಭಕ್ತರನ್ನು ಆಹ್ವಾನಿಸಿದರು.

ನಗರದ ಚಿತ್ತವಾಡ್ಗಿ, ಬಸವೇಶ್ವರ ಬಡಾವಣೆ, ಹೊಸ ಅಮರಾವತಿ ಪ್ರದೇಶಗಳಲ್ಲಿ ಪಾದಯಾತ್ರೆ ತೆರಳಿದರು. ಭಕ್ತರು ಪಾದಪೂಜೆ ನೆರವೇರಿಸಿ ಭಕ್ತಿ ಸಮರ್ಪಿಸಿದರು. ನಗರದ ಅಮರಾವತಿಯಲ್ಲಿ ಸಭೆ ನಡೆಸಿ ಆಶೀರ್ವಚನ ನೀಡಿದರು. ಶ್ರೀಮಠವು ಭಾವೈಕ್ಯತೆಯ ಮಠವಾಗಿದೆ. ಅವರವರ ಆಚರಣೆಗಳು ಹಲವಿದ್ದರೂ ಶ್ರೀಮಠವೂ ಈವರೆಗೂ ಎಲ್ಲ ಧರ್ಮದ ಭಕ್ತರನ್ನು ಆಹ್ವಾನಿಸಿ, ಸರ್ವಧರ್ಮದವರ ಸಾಮೂಹಿಕ ವಿವಾಹಗಳನ್ನು ಜರುಗಿಸುತ್ತಾ ಬಂದಿದೆ. ಗುರುಗಳ ಆಶಯದಂತೆ ಮಠದ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗಲಾಗುತ್ತಿದೆ. ಎಲ್ಲಾ ಭಕ್ತರು ಮಠದೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡಾಗ ಭಕ್ತರ



ಒತ್ತಡಗಳು ನಿವಾರಣೆಯಾಗುತ್ತವೆ ಎಂದರು. ಶಾಖಾ ಮಠಗಳ ಶ್ರೀಗಳು, ಸಮಾಜದ ಮುಖಂಡರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

## ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗಲಿದ್ದಾರೆ

**ಹಂಪಿ ಟೈಮ್ಸ್ ಹೊಸಪೇಟೆ:** ರಾಜ್ಯ ಬಿಜೆಪಿಗೆ ನೂತನ ಸಾರಥಿಯನ್ನಾಗಿ ಬಿ.ವೈ.ವಿಜಯೇಂದ್ರ ಅವರನ್ನು ನೇಮಿಸಿರುವುದು ಪಕ್ಷದ ಯುವ ಕಾರ್ಯಕರ್ತರಲ್ಲಿ ನವ ಚೈತನ್ಯ ಮೂಡಿಸಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ ಹೇಳಿದರು. ನಗರದ ಬಿಜೆಪಿ ಕಚೇರಿಯಲ್ಲಿ ಶನಿವಾರ ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಹಿಸಿ ಹಂಚಿಕೊಂಡು ಸಂಭ್ರಮಿಸಿದರು. ಮುಂಭರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತೆ 25 ಸ್ಥಾನಗಳಲ್ಲಿ ಗೆಲುವು ದಾಖಲಿಸಲಿದೆ. ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗುವರು ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪದಾಧಿಕಾರಿಗಳು, ಕಾರ್ಯಕರ್ತರು ಇದ್ದರು.









# ವಿಜಯನಗರ ಸಾಮ್ರಾಜ್ಯದ (ಹಂಪಿಯ) ನೀರಾವರಿ ವ್ಯವಸ್ಥೆ

> ""ಕೆರೆಯನ್ನು ಕಟ್ಟಿಸು ಬಾವಿಯನ್ನು ತೋಡಿಸು ದೇವಾಲಯಗಳನ್ನು ನಿರ್ಮಿಸು ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು ಸ್ನೇಹಿತರಿಗೆ ಸಹಾಯಕನಾಗು ನಂಬಿದವರಿಗೆ ಆಶ್ರಯದಾತನಾಗು ಸತ್ಪುರುಷರನ್ನು ರಕ್ಷಿಸು............""
>
> – ಹಂಪಿಯ ಶಾಸನವೊಂದರ ವಾಕ್ಯ.



## ಹಂಪಿ ಒಳನೋಟ

ಎಂ.ಎಂ.ಶಿವಪ್ರಕಾಶ
ಹೊಸಪೇಟೆ

ಹಂಪಿಯ ಶಾಸನ ಒಂದರಲ್ಲಿ ಈ ಸಾಲುಗಳು ವಿಜಯನಗರ ಸಾಮ್ರಾಜ್ಯದ ಸಾಮಾಜಿಕ ಸಾಂಸ್ಕೃತಿಕ ಹಿರಿಮೆಯನ್ನು ತೋರಿಸುತ್ತದೆ. ಜನಸಾಮಾನ್ಯರ ನೆಮ್ಮದಿಯ ಬದುಕಿಗೆ ಬೇಕಾಗಿರುವ ಮೂಲಭೂತ ಅವಶ್ಯಕತೆ ನೀರು ,ಅನ್ನ, ಆಶ್ರಯ ,ಸಹಾಯ ಇವುಗಳನ್ನು ಕಲ್ಪಿಸುವ ಉದಾತ್ತವಾದ ಧ್ಯೇಯವನ್ನು ಈ ಸಾಮ್ರಾಜ್ಯದ ಅರಸುರುಗಳು ಹೊಂದಿದ್ದಲ್ಲದೆ ಅಕ್ಷರ ಸಹ ಅವುಗಳನ್ನು ಪಾಲಿಸಿ ಕಾರ್ಯರೂಪಕ್ಕೆ ತಂದಿದ್ದು ಚಾರಿತ್ರಿಕವಾದದ್ದಾಗಿದೆ .ಇವರ ನೀರಾವರಿ ಗೆ ಸಂಬಂಧಿಸಿದ ಕೆರೆ ಕಟ್ಟೆಗಳ ನಿರ್ಮಾಣ ಅಣೆಕಟ್ಟುಗಳು ಕಾಲುವೆಗಳು ಹಾಗೂ ನದಿ ನೀರಾವರಿ ಇವುಗಳು ಕೇವಲ ಕುಡಿಯುವ ನೀರಿಗೆ ಮಾತ್ರ ಸೀಮಿತವಾಗದೆ ಕೃಷಿಯ ಮೂಲಕ ಸಾಮ್ರಾಜ್ಯಕ್ಕೆ ಆರ್ಥಿಕತೆಯನ್ನು ಸಹ ತಂದುಕೊಟ್ಟಿವೆ.

ವಿಜಯನಗರದ ಅರಸರಿಗೆ ಸಾಮ್ರಾಜ್ಯವನ್ನು ವಿಸ್ತರಿಸುವುದೇ ಏಕೈಕ್ಯ ಉದ್ದೇಶವಾಗಿರಲಿಲ್ಲ ಕಾಳಗ ಕದನಗಳ ಜೊತೆ ಜೊತೆಗೆ ಸಾಮ್ರಾಜ್ಯದ ಜನರ ಏಳಿಗೆ ಸಮೃದ್ಧಿ ಧಾರ್ಮಿಕ ಸಾಂಸ್ಕೃತಿಕ ಸಾಹಿತ್ಯಿಕ, ಕಲೆ ವಾಸ್ತು ಶಿಲ್ಪ, ಕ್ರೀಡೆ ,ಸಂಗೀತ ಹೀಗೆ ಹಲವು ಕಾರ್ಯಗಳನ್ನು ಸಹ ನಿರ್ವಹಿಸಿದ್ದವರು ರಾಜಪ್ರಭುತ್ವದ ಕಾಲಘಟ್ಟದಲ್ಲಿ ಅನೇಕ ರಾಜ ಮನೆತನಗಳು ರಾಜರುಗಳು ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಿದ್ದವರು ಆದರೆ ವಿಜಯನಗರದ ಅರಸರುಗಳು ಹಿಂದಿನ ಸಾಮ್ರಾಜ್ಯಗಳ ಅರಸರುಗಳಿಗಿಂತ ವೈಜ್ಞಾನಿಕವಾಗಿ ತಾಂತ್ರಿಕವಾಗಿ ಕೆರೆ ಕಟ್ಟೆಗಳು ,ಅಣೆಕಟ್ಟುಗಳು, ಕಾಲುವೆಗಳನ್ನು ನಿರ್ಮಿಸಿ ಸಾಮ್ರಾಜ್ಯಕ್ಕೆ ಕುಡಿಯುವ ನೀರು ಹಾಗೂ ಕೃಷಿ ಗಾಗಿ ನೀರನ್ನು ಬಳಸಿಕೊಂಡಿದ್ದಾರೆ.

ದೇವಾಲಯಗಳನ್ನು ನಿರ್ಮಿಸಿದಷ್ಟೇ ಪುಣ್ಯ ಕೆರೆಕಟ್ಟೆಗಳನ್ನು ನಿರ್ಮಿಸುವುದರಿಂದಲೂ ಲಭ್ಯವಾಗುತ್ತದೆಂಬ ನಂಬಿಕೆಯಿಂದ ಅಂದಿನ ರಾಜ ಮಹಾರಾಜರುಗಳು ಕೆರೆಕಟ್ಟೆ, ಅಣೆಕಟ್ಟುಗಳನ್ನು ನಿರ್ಮಿಸಿಕೊಂಡು ಬಂದಿದ್ದವರು ಈ ಪರಂಪರೆಯಲ್ಲಿ ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ನಿರ್ಮಿಸಿರುವ ಕೆರೆ ಕಟ್ಟೆಗಳು ಊಟಿ ಬಾವಿಗಳು ಆಣೆಕಟ್ಟುಗಳು ಕಾಲುವೆಗಳು ಪುಷ್ಕರಣಿಗಳು ನೀರಿನ ಸಂಗ್ರಹದ ತೊಟ್ಟಿಗಳು ನೀರಿನ ಕಾರಂಜಿಗಳು ಇಂದಿಗೂ ಹಂಪಿಯಲ್ಲಿವೆ .ಅಂದಿನ ಕೆರೆ ಕಾಲುವೆಗಳು ನೀರಾವರಿಗೆ ಪ್ರಮುಖವಾದ ಕಾರ್ಯನಿರ್ವಹಿಸಿದ್ದಲ್ಲದೆ ,ಇಂದು ಸಹ ಅವುಗಳು ರೈತರ ನೀರಾವರಿಗೆ ಪ್ರಮುಖವಾದ ಪಾತ್ರ ವಹಿಸಿವೆ ಎಂದರೆ ಆಶ್ಚರ್ಯವಾಗಲು ಬಹುದು. ಹೌದು ಸುಮಾರು 400 ರಿಂದ 500 ವರ್ಷಗಳಾದರೂ ಇವುಗಳು ಇಂದಿಗೂ ಹಂಪಿಯ ಪ್ರದೇಶದಲ್ಲಿ ರೈತರ ಜೀವನಾಡಿಯಾಗಿವೆ.

ವಿಜಯನಗರ ಸಾಮ್ರಾಜ್ಯವು ಇಡೀ ದಕ್ಷಿಣ ಭಾರತವನ್ನು ಅಂದರೆ ಹಂಪಿ ಹೊಳೆ ಕೃಷ್ಣಾ ನದಿಗಳ ದಕ್ಷಿಣ ಭಾಗ ಕೆಲಕಾಲ ಸಿಂಹಳದ ದ್ವೀಪದವರಿಗೂ ಹಾಗೂ ಉತ್ತರದ ಒರಿಸ್ಸಾದವರಿಗೂ ವ್ಯಾಪಿಸಿತ್ತು. ಇವರ ಆಡಳಿತಕಾಲದಲ್ಲಿ ಬರಿ ಹಂಪಿ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಅಷ್ಟೇ ಅಲ್ಲ ,ಆಂಧ್ರ ತಮಿಳ್ ನಾಡು ಹೀಗೆ ಎಲ್ಲಾ ಕಡೆ ಕೆರೆಕಟ್ಟೆಗಳನ್ನು ನಿರ್ಮಿಸಿ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಿದ್ದ ಬಗ್ಗೆ ಶಾಸನಗಳು ಸಾಕ್ಷಿಯಾಗಿವೆ. ವಿಜಯನಗರದ ಅರಸರೊಂದಿಗೆ ಅವರ ಮಂತ್ರಿಗಳು ಅಧಿಕಾರಿಗಳು ಸಾಮಂತರು ದಾನಿಗಳು ಸಹ ಕೆರೆಕಟ್ಟೆಗಳ ನಿರ್ಮಾಣದ ಕಾರ್ಯಗಳನ್ನು ಮಾಡಿದ್ದಾರೆ.

### ಹಂಪಿ ಪ್ರದೇಶದ ಯೋಜನೆಗಳು

ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಇಡೀ ದಕ್ಷಿಣ ಭಾರತದಲ್ಲಿ ನೀರಾವರಿ ಯೋಜನೆಗಳನ್ನು ನಿರ್ವಹಿಸಿದ್ದಾರೆ. ಆದರೆ ಇಲ್ಲಿ ಕೇವಲ ಹಂಪಿಯ ಪ್ರದೇಶಕ್ಕೆ ಸೀಮಿತಗೊಳಿಸಿ ನೀರಾವರಿಯ ಕೆಲವು ಯೋಜನೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದು ಈ ಲೇಖನದ ಪ್ರಯತ್ನವಾಗಿದೆ.

### ಅಣೆಕಟ್ಟುಗಳು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡಿದ್ದೆ ಹಂಪಿ ಹೊಳೆಯ ಬಲತಟದ ಮೇಲೆ. ಇಲ್ಲಿಂದಲೇ ಇಡೀ ದಕ್ಷಿಣ ಭಾರತವನ್ನು ಆಳಿದವರು ವಿಜಯನಗರದ ಅರಸರು.ನಿಜ ಅರ್ಥದಲ್ಲಿ ದಶ ದಿಕ್ಕುಗಳಲ್ಲಿಯೂ ತನ್ನ ವಿಜಯದ ಪತಾಕಿಯನ್ನು ಹಾರಿಸಿತ್ತು. ತಮ್ಮ ಸಾಮ್ರಾಜ್ಯದ ರಾಜಧಾನಿ ಹಂಪಿಗೆ ಬೇಕಾಗಿದ್ದ ನೀರಿಗೆಂದೆ ಅವರು ಹಲವಾರುನೀರಾವರಿಯೋಜನೆಗಳನ್ನುರೂಪಿಸಿಜಾರಿಗೊಳಿಸಿದ್ದವರು. ಬರಿ ನಗರದ ಜನರಿಗೆ ಕುಡಿಯುವ ನೀರನ್ನು ಅಷ್ಟೇ ಅಲ್ಲ ವ್ಯವಸಾಯಕ್ಕೆ ಬೇಕಾದ ನೀರಿನ ವ್ಯವಸ್ಥೆಯನ್ನು ಸಹ ಮಾಡಿದ್ದವರು.ಹಂಪಿಯ ನಂತರ ಸುತ್ತಲಿನ ಪ್ರದೇಶದಲ್ಲಿ ಸುಮಾರು 18 ಆಣೆಕಟ್ಟುಗಳನ್ನು ಹಂಪಿಹೊಳೆಗೆ ಅಥವಾ ತುಂಗಭದ್ರ ನದಿಗೆ ನಿರ್ಮಿಸಿದ್ದರು ಎಂದರೆ ಆಶ್ಚರ್ಯವಾಗಬಹುದು.

ಹಂಪಿ ಹೊಳೆ ಅಥವಾ ತುಂಗಭದ್ರ ನದಿಯು ಹಂಪಿಯಿಂದ ಹರಿಯುತ್ತಾ ಮುಂದೆ ಆಂಧ್ರದ ಕರ್ನೂಲ್ ವರಿಗೆ ಹರಿದು ಕೃಷ್ಣಾ ನದಿಯನ್ನು ಸೇರುತ್ತದೆ. ಈ ನದಿಗೆ ವಿಜಯನಗರದ ಅರಸರು ಸುಮಾರು 18 ಆಣೆಕಟ್ಟುಗಳನ್ನು ಕಟ್ಟಿದ್ದರು ಎನ್ನುವುದು ಶಾಸನಗಳಿಂದ ತಿಳಿದು ಬರುತ್ತದೆ 1399ರಲ್ಲಿ ಎರಡನೆಯ ಬುಕ್ಕರಾಯ ಮೊದಲನೆಯ ತುರ್ತು ಆಣೆಕಟ್ಟನ್ನು ಹಂಪಿಹೊಳೆಗೆ ನಿರ್ಮಿಸಿದ್ದವನು. ಇದಕ್ಕೂ ಮೊದಲು ಈಗಿನ ಹೂವಿನಹಡಗಲಿ ತಾಲೂಕಿನ ತುಂಗಭದ್ರಾ ನದಿಯ ತಟದಲ್ಲಿರುವ ಮೊದಲ ಗಟ್ಟಿಯಂಬಲ್ಲಿ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟಲಾಗಿತ್ತು.ಆದರೆ ಈ ಅಣೆಕಟ್ಟು ಅನೇಕ ಬಾರಿ ಒಡೆದು ಹೋದಾಗ ಇದನ್ನು ಕೈ ಬಿಡಲಾಯಿತ್ತಂತೆ.

"ಮೊದಲು ಕಟ್ಟೆ" ಈಗಿನ ಮೊದಲ ಗಟ್ಟೆಯಿಂದ ಪೂರ್ವಕ್ಕೆ ಹರಿಯುವ ಹೊಳೆಗೆ ವಲ್ಲಭಾಪುರ ಎಂಬಲ್ಲಿ 1521 ರಲ್ಲಿ ಕೃಷ್ಣದೇವರಾಯ ಅಣೆಕಟ್ಟನ್ನು ನಿರ್ಮಿಸುತ್ತಾನೆ.ಇದು ಹೊಳೆಯ ಬಲದಂಡೆಯಿಂದ ನಿಜಾಂ ಪ್ರಾಂತದ ಕೋರ್ ಗಲ್ ವರೆಗೂ ಅಡ್ಡಲಾಗಿ ನಿರ್ಮಿಸಲಾಗಿತ್ತು.ನದಿಯ ಬಲದಂಡೆಯ ಮೇಲಿನ ಭಾಗವನ್ನು ಈ ಬಲಭಾಗದ ಕಾಲುವೆಗೆ ಬಸವಣ್ಣ ಕಾಲುವೆ ಎಂದು ಎಡದಂಡೆಯ ಕಾಲುವಿಗೆ ಕೋರ್ಗಲ್ ಕಾಲುವೆ ಎಂದು ಕರೆಯಲಾಗಿದೆ. ವಲ್ಲಭಾಪುರ ಗ್ರಾಮ ಹಾಗೂ ಅಣೆಕಟ್ಟು ತುಂಗಭದ್ರ ಡ್ಯಾಮ್ ನಿರ್ಮಾಣದ ನಂತರ ಹಿನ್ನಿರಿನಲ್ಲಿ ಇವು ಮುಳುಗಡೆಯಾಗಿವೆ .ಮೊದಲ ಘಟ್ಟ ವಲ್ಲಾಭಾಪುರ ಆಣೆಕಟ್ಟುಗಳ ನಂತರ ರಾಮಣ್ಣ ಕುರದ ಗುಡ್ಡೆ ಅಣೆಕಟ್ಟುಗಳನ್ನು ಸಹ ನಿರ್ಮಿಸಿದ್ದಾರೆ. ನದಿಯ ನಡು ಗಡ್ಡೆಗೆ ಕಟ್ಟಿದ್ದರಿಂದ ಖುರದ ಗಡ್ಡೆ ಎಂದು ಕರೆಯಲಾಗಿದೆಯಂತೆ. ಇದು ಸಹ ಹಿನ್ನಿರಿನಲ್ಲಿ ಮುಳುಗಡೆಯಾಗಿದೆ. ನದಿಯ ಎಡ ದಂಡೆಯ ಕಾಲುವೆಗೆ ರಾಯರ ಕಾಲುವೆ ಎಂದು ವಿಜಯನಗರದ ಅರಸರ ಹೆಸರನ್ನು ಗೌರವದಿಂದ ಇದಕ್ಕೆ ಕರೆಯಲಾಗಿದೆ ಅಣೆಕಟ್ಟು ತುಂಗಭದ್ರ ಡ್ಯಾಮಿನ ಹಿನ್ನೀರಿನಲ್ಲಿ ಮುಳುಗಿದ್ದರು ರಾಯರ ಕಾಲುವೆ ಈಗಲೂ



ಇದೆ.ಈಗಿನ ಟಿಬಿ ಡ್ಯಾಮ್ ನಿಂದ ನೀರು ಹರಿಸಲಾಗುತ್ತದೆ.ನೀರಾವರಿಗೆ ಈ ಕಾಲುವೆ ಮೂಲಕ ನೀರನ್ನು ಉಪಯೋಗಿಸಲಾಗುತ್ತಿದೆ. ಕಮಲಾಪುರದ ಕೆರೆಗೆ ಹರಿಯುವುದರ ಮೂಲಕ ಕೊನೆಯಾಗುತ್ತದೆ.

ಹಂಪಿ ಹೊಳೆಗೆ ನಿರ್ಮಿಸಿದ ಮತ್ತೊಂದು ಅಣೆಕಟ್ಟು ರಾಮಸಾಗರದ್ದು ಇದನ್ನು ಬುಕ್ಕಸಾಗರದ ಹತ್ತಿರ ನಿರ್ಮಿಸಲಾಗಿತ್ತು.ನದಿಯ ನಡು ಗಡ್ಡೆ ವರೆಗೆ ದೊಡ್ಡ ದೊಡ್ಡ ಬಂಡೆಗಳನ್ನು ಅಡ್ಡಲಾಗಿರಿಸಿ ತಡಗೋಡೆಯನ್ನು ನಿರ್ಮಿಸಲಾಗಿದೆ. ಈಗಿನ ಕೊಪ್ಪಳ ಜಿಲ್ಲೆಯ ಹಿರೇ ಜಂತು ಕಲ್ಲು ಎಂಬಲ್ಲಿ ಹೀಗೆ ಕಟ್ಟಲಾಗಿತ್ತು ಇದೇ ರೀತಿ ಕಂಪಲಿ ಅಣೆಕಟ್ಟನ್ನು ಸಹ ನಿರ್ಮಿಸಲಾಗಿತ್ತು. ಮುಂದೆ ಸಿರಗುಪ್ಪಾದ ಹತ್ತಿರವೂ ಅಣೆಕಟ್ಟೆಯನ್ನು ನಿರ್ಮಿಸಲಾಗಿತ್ತು ಹೀಗೆ ಸಣ್ಣ ದೊಡ್ಡ ಆಣೆಕಟ್ಟುಗಳನ್ನು ಹಂಪಿಯೊಳಗೆ ಅಡ್ಡಲಾಗಿ ನಿರ್ಮಿಸಲಾಗಿತ್ತು .ಸುಮಾರು 18 ಈ ರೀತಿಯ ಅಣೆಕಟ್ಟುಗಳನ್ನು ವಿಜಯನಗರದ ಅರಸರ ಕಾಲದಲ್ಲಿ ನಿರ್ಮಿಸಲಾಗಿತ್ತು ಎಂಬುದು ಅಧ್ಯಯನಕಾರರಿಂದ ಕಂಡುಬಂದಿದೆ.

### ಕೆರೆಕಟ್ಟೆಗಳು

ವಿಜಯನಗರದ ಅರಸರ ಕಾಲಘಟ್ಟದಲ್ಲಿ ನಿರ್ಮಿಸಿದ ಕೆರೆಕಟ್ಟೆಗಳ ಸಂಖ್ಯೆ ಅಗಾಧವಾದದ್ದು. ತಮ್ಮ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಕುಡಿಯುವ ನೀರು ವ್ಯವಸಾಯಕ್ಕಾಗಿ ಈ ಕೆರೆಗಳನ್ನ ನಿರ್ಮಿಸಿದ್ದರು. ಅಂದು ನಿರ್ಮಿಸಿದ ಕೆರೆಗಳು ಇಂದಿಗೂ ಬಳಕೆಯಲ್ಲಿವೆ. ಕ್ರಿ.ಶ. 1417ರ ಶಾಸನ ಒಂದರಲ್ಲಿ ತ್ರಿಯಂಬಕ ಪುರದ ತ್ರಿಯಂಬಕೇಶ್ವರ ದೇವರಿಗೆ ಆ ಪ್ರದೇಶದಲ್ಲಿ 18 ಕೆರೆಗಳನ್ನ ನಿರ್ಮಿಸಿ ಅವುಗಳನ್ನು ದೇವರಿಗೆ ದಾನವಾಗಿ ನೀಡಿದ ಬಗ್ಗೆ ಉಲ್ಲೇಖವಿದೆ. ಇದರಿಂದ ಕೆರೆಗಳನ್ನು ನಿರ್ಮಿಸಲು ಅತ್ಯಂತ ಮಹತ್ವವನ್ನು ಅವರು ನೀಡಿದ್ದರು ಎಂಬುದು ಗೊತ್ತಾಗುತ್ತದೆ.ಕರ್ನಾಟಕ ಆಂಧ್ರಪ್ರದೇಶ ತಮಿಳುನಾಡಿನಲ್ಲಿಯೂ ಸಹ ಇವರು ಕೆರೆಕಟ್ಟೆಗಳನ್ನು ನಿರ್ಮಿಸಿದ್ದಾರೆ.

### ಹಂಪಿ ಪ್ರದೇಶದ ಕೆರೆಗಳು

ವಿಜಯನಗರದ ಅರಸರು ನೂರಾರು ಕೆರೆಗಳನ್ನು ನಿರ್ಮಿಸಿದ್ದರ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. ಇವರುಗಳು ನಿರ್ಮಿಸಿದ ಕೆರೆಗಳನ್ನು ಕೇವಲ ಹಂಪಿ ಪ್ರದೇಶದ ಕೆರೆಕಟ್ಟೆಗಳನ್ನು ಗಮನಿಸಿದಾಗ ಕ್ರಿ.ಶ. 1513ರಲ್ಲಿಯೇ ಹಂಪಿಯ ಎರಡು ಶಾಸನಗಳ ಪ್ರಕಾರ ಹಂಪಿಯ ಬಳಿ 5 ಕೆರೆಗಳ ನಿರ್ಮಾಣದ ಬಗ್ಗೆ ವಿವರವಿದೆ ಅವುಗಳೆಂದರೆ ಕವಕೀಯ ಕಟ್ಟೆ, ಭೂಪತಿ ಕೆರೆ ಗೌರಜೀಯ ಕೆರೆ ,ನಾಗಲಾಪುರ ಕಾಲುವೆ ಹಾಗೂ ಚಿಕ್ಕರಾಯ ಕೆರೆ. ಇದಕ್ಕೂ ಮೊದಲು 1429 ಮತ್ತು 1432ರ ಶಾಸನಗಳಲ್ಲಿ ಹಿರಿಯ ಕೆರೆಯ ಬಗ್ಗೆ ಉಲ್ಲೇಖವಿದೆ. ಕೃಷ್ಣದೇವರಾಯನ ಆಡಳಿತದಲ್ಲಿ ಅತಿ ಹೆಚ್ಚು ಕೆರೆಗಳನ್ನ ನಿರ್ಮಿಸಲಾಗಿದೆ .ಬಹುತೇಕ ಕೆರೆಗಳನ್ನು ಆಂಧ್ರಪ್ರದೇಶದಲ್ಲಿ ನಿರ್ಮಿಸಲಾಗಿದೆ.

### ಕಮಲಾಪುರ ಕೆರೆ

ಹೊಸಪೇಟೆ ಕಮಲಾಪುರ ರಸ್ತೆಯ ಮೇಲೆ ಕಾಣಸಿಗುವ ಕಮಲಾಪುರ ಕೆರೆಯು ಕೃಷ್ಣದೇವರಾಯನ ಆಡಳಿತದ ಅವಧಿಯಲ್ಲಿ ನಿರ್ಮಿಸಲಾಗಿದೆ .ವಲ್ಲಭಾಪುರ ಅಣೆಕಟ್ಟಿನ ಕಾಲುವೆ ಮೂಲಕ ಈ ಕೆರೆಗೆ ನೀರನ್ನು ಒದಗಿಸಲಾಗುತ್ತಿತ್ತು. ಈ ಕೆರೆಯಿಂದಲೇ ರಾಜಧಾನಿ ಹಂಪಿ ಪಟ್ಟಣಕ್ಕೆ ನೀರನ್ನು ಸಹ ಸರಬರಾಜ ಮಾಡಲಾಗುತ್ತಿತ್ತು. ಕಮಲಾಪುರ ವಿಜಯನಗರ ರಾಜಧಾನಿಯ ಭಾಗವೆಯಾಗಿತ್ತು ಹೀಗಾಗಿ ಕಮಲಾಪುರದ ಕೆರೆಯಿಂದ ಹಂಪಿ ಪಟ್ಟಣಕ್ಕೆ ವರದರಾಜಮ್ಮನ ಪಟ್ಟಣ ,ಮಾಲ್ಯವಂತ ಬಜಾರಗಳಿಗೆ ನೀರನ್ನು ಒದಗಿಸಲಾಗುತ್ತಿತ್ತು. ಅಂದು ಈ ಕೆರೆಯು ಹಂಪಿಯ ಕುಡಿಯುವ ನೀರಿಗೆ ಹಾಗೂ ಕೃಷಿ ನೀರಾವರಿಗಾಗಿ ನೀರನ್ನು ಒದಗಿಸಲಾಗುತ್ತಿತ್ತು .ಸುಮಾರು 500 ವರ್ಷಗಳಿಂದಲೂ ಈ ಕೆರೆಯು ಕೃಷಿಗೆ ನೀರನ್ನು ಒದಗಿಸುತ್ತಾ ಬಂದಿರುವುದು ಸೋಜಿಗದ ಸಂಗತಿ ಆಗಿದೆ.ಇಂದು ಸಾವಿರಾರು ಎಕರೆ ಕೃಷಿ ಅಚ್ಚುಕಟ್ಟು ಪ್ರದೇಶವು ಕಮಲಾಪುರ ಕೆರೆಯ ವ್ಯಾಪ್ತಿಯಲ್ಲಿದೆ ಈ ಕೆರೆಯ ನೀರಿನಿಂದಲೇ ರೈತರು ಕಬ್ಬು ,ಭತ್ತ ,ಬಾಳೆ, ತೆಂಗು ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಹೀಗಾಗಿ ಕಮಲಾಪುರ ರೈತರ ಆರ್ಥಿಕತೆಯ ಬೆನ್ನೆಲುಬಾಗಿದೆ ಈ ಕೆರೆ.

ಹಂಪಿಯಲ್ಲಿ ನೀರನ್ನು ಸಂಗ್ರಹಿಸುತ್ತಿದ್ದ ರಾಣಿಯರ ಸ್ನಾನ ಗೃಹ, ಅಷ್ಟಕೋನ ಸ್ನಾನ ಗೃಹ ,ಸಾರ್ವಜನಿಕ ಸ್ನಾನ ಗೃಹ ,ಇಳಿಯುವ ಬಾವಿ ,ಜಲಮಂಟಪ, ವಿಹಾರ ಮಂಟಪ ಮೊದಲಾದವುಗಳಿಗೆ ಕಮಲಾಪುರದ ಕೆರೆಯಿಂದಲೇ ನೀರನ್ನು ಒದಗಿಸಲಾಗುತ್ತಿತ್ತು.

### ಡಣಾಯಕನ ಕೆರೆ ಮತ್ತು ರಾಯರ ಕೆರೆ.

ಈಗಿನ ಹೊಸಪೇಟೆ ತಾಲೂಕಿನಲ್ಲಿರುವ ಢಣಾಪುರ ಗ್ರಾಮದಲ್ಲಿ ಢಣಾಯಕನ ಕೆರೆ ಇದೆ ಇದನ್ನು ಮುದ್ದನೆಂಬುವನು ನಿರ್ಮಿಸಿದ್ದಾನೆ ಇವನು ಮುದ್ದು – ಡಣಾಯಕ ಇವನು ನೀರಾವರಿ ತಂತ್ರಜ್ಞಾನ ಆಗಿದ್ದ ಎನ್ನಲಾಗಿದೆ ಅರಸರು ಇವನಿಗೆ ದಂಡನಾಯಕ ಅಥವಾ ಢಣಾಯಕ ಎಂಬ ಬಿರುದನ್ನು ನೀಡಿದ್ದಾರೆ ಎನ್ನಲಾಗಿದೆ. ಹೊಸಪೇಟೆ ಹೊರವಲಯದಲ್ಲಿರುವ ಜೋಳದ ರಾಶಿ ಗುಡ್ಡದ ಕೆಳಗೆ ರಾಯರ ಕೆರೆಯನ್ನು ಸಹ ಕಟ್ಟಿಸಿದ್ದಾನೆ

ಕೃಷ್ಣದೇವರಾಯ ಹೊಸದಾಗಿ ಹೊಸಪೇಟೆ ಹೊರವಲಯದಲ್ಲಿ ಪಟ್ಟಣವನ್ನು ಸ್ಥಾಪಿಸಿದಾಗ ಇದಕ್ಕೆ ನೀರಿಗಾಗಿ ನಿರ್ಮಾಣಗೊಂಡಿದ್ದು ಈ ಕೆರೆ ಇದನ್ನು ರಾಯರ ಕೆರೆ ಎಂದು ಕರೆಯಲಾಗುತ್ತದೆ ಆದರೆ ಈಗ ಇದು ಹಾಳು ಬಿದ್ದಿದೆ.

### ಮಲ್ಲಪ್ಪನ ಗುಡಿಯ ಬಾವಿ

ಆಣೆಕಟ್ಟುಗಳು ಕಾಲುವೆಗಳನ್ನು ಕೆರೆಕಟ್ಟೆಗಳನ್ನು ನಿರ್ಮಿಸಿದಂತೆ ಅನೇಕ ವಿಧದ ಬಾವಿಗಳನ್ನು ಸಹ ವಿಜಯನಗರದ ಅರಸರು ನಿರ್ಮಿಸಿದ್ದವರು ಇವುಗಳಲ್ಲಿ ಮಲ್ಲಪ್ಪನ ಗುಡಿಯಲ್ಲಿರುವ ಮಾಳಿಗ ಕೋಪ ಆರಾಮ ಬಾವಿ.ವಿಜಯನಗರಕ್ಕೆ ಬರುವ ಹೋಗುವ ಪ್ರಯಾಣಿಕರ ಕುಡಿಯುವ ನೀರಿಗಾಗಿ ನಿರ್ಮಿಸಿದ್ದೆ ಈ ಮಲ್ಲಪ್ಪನ ಗುಡಿಯ ಬಾಗಿ ಹೊಸಪೇಟೆ ಕಮಲಾಪುರದ ಮಧ್ಯದ ಮಲ್ಲಪ್ಪನ ಗುಡಿ ಗ್ರಾಮದಲ್ಲಿ ಈ ಬಾವಿ ಇಂದಿಗೂ ಕಾಣಿಸಿತ್ತದೆ ಹಾಗೂ ಪುರಾತತ್ವ ಇಲಾಖೆಯವರು ಇದನ್ನು ನೋಡಿಕೊಳ್ಳುತ್ತಿದ್ದಾರೆ

ಹೀಗೆ ವಿಜಯನಗರದ ಅರಸರು ಅದರಲ್ಲೂ ಕೃಷ್ಣದೇವರಾಯನ ಕಾಲದಲ್ಲಿ ಕೆರೆಕಟ್ಟೆಗಳು ಅಣೆಕಟ್ಟುಗಳು ಕಾಲವೇಗಳನ್ನು ನಿರ್ಮಿಸಿದ್ದಾರೆ ಇದರಿಂದ ಸಾಮ್ರಾಜ್ಯದ ಕುಡಿಯುವ ನೀರು ಹಾಗೂ ನೀರಾವರಿ ವ್ಯವಸ್ಥೆಗೆ ನೀರಿನ ಸೌಲಭ್ಯ ದೊರೆತು ನಾಡು ಸಮೃದ್ಧವಾಗಿತ್ತು.

# ಒನಕೆ ಓಬವ್ವ ವೇಷದಲ್ಲಿ ಬಾಲಕಿಯರು

■ **ಹಂಪಿ ಟೈಮ್ಸ್ ಹೊಸಪೇಟೆ**

ವೀರ ವನಿತೆ ಒನಕೆ ಓಬವ್ವನ ಆದರ್ಶಗಳನ್ನು ಅಳವಡಿಸಿಕೊಂಡು ದೇಶಪ್ರೇಮ ಮೆರೆಯಬೇಕು ಎಂದು ತಹಶೀಲ್ದಾರ ವಿಶ್ವಜೀತ ಮೆಹತಾ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹೊಸಪೇಟೆ ನಗರಸಭೆ ಸಹಯೋಗದಲ್ಲಿ ನಗರದ ಚಲುವಾದಿಕೇರಿಯಲ್ಲಿ ಶನಿವಾರ ಜರುಗಿದ ವೀರ ವನಿತೆ ಒನಕೆ ಓಬವ್ವ ಜಯಂತಿಯಲ್ಲಿ ಮಾತನಾಡಿದರು.

ಗಣ್ಯರು ಜ್ಯೋತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ವೀರ ವನಿತೆ ಒನಕೆ ಓಬವ್ವ ಭಾವಚಿತ್ರಕ್ಕೆ ಪುಷ್ಪಾರ್ಪಿಸಿ ಗೌರವನಮನ ಸಲ್ಲಿಸಿ ದರು. ಪುಟ್ಟ ಬಾಲಕಿಯರು ಒನಕೆ ಓಬವ್ವ ವೇಷಧರಿಸಿ ಕೈಯಲ್ಲಿ ಒನಕೆ ಹಿಡಿದು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕಚೇರಿಯ ತಹಶೀಲ್ದಾರ ಷಣ್ಮುಖಪ್ಪ, ಗಣ್ಯರಾದ ಹೆಚ್. ಆರ್.ಗುರುದತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ ರಂಗಣ್ಣವರ್ ಸೇರಿದಂತೆ ಜನಪ್ರತಿನಿಧಿಗಳು, ಸಮಾಜದ ಮುಖಂಡರು




ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

**ಅದ್ದೂರಿ ಮೆರವಣಿಗೆ:** ಕಾರ್ಯಕ್ರಮದ ಬಳಿಕ ಒನಕೆ ಓಬವ್ವ ಭಾವಚಿತ್ರದ ಮೆರವಣಿಗೆಯು ಚಲವಾದಿಕೇರಿಯಿಂದ ಪ್ರಾರಂಭಗೊಂಡು ಮದಕರಿ ನಾಯಕ ವೃತ್ತ, ಮುಖ್ಯ ಬಜಾರದ ಮಸೀದಿ, ಗಾಂಧಿ ಚೌಕ, ಕೆ.ಕೆ.ಆರ್.ಟಿ.ಸಿ ಬಸ್ ನಿಲ್ದಾಣ, ಪುನೀತ್ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ಚಲವಾದಿಕೇರಿವರೆಗೆ ಅದ್ದೂರಿಯಾಗಿ ನಡೆಯಿತು. ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳು, ಮಹಿಳೆಯರು ಪಾಲ್ಗೊಂಡು ಮೆರವಣಿಗೆಯನ್ನು ಆಕರ್ಷಕಗೊಳಿಸಿದರು.

# ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸಹಕಾರಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದು ಶಾಸಕ ಡಚ್.ಆರ್.ಗವಿಯಪ್ಪ ಅಭಿಪ್ರಾಯ ಪಟ್ಟರು.

ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಗರದ ವಿಜ್ಞಾನ ಇ-ಟೆಕ್ನೋ ಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು. ಶಿಕ್ಷಣ, ಮನರಂಜನೆ ಹಾಗೂ ಅಭಿವೃದ್ಧಿಗೆ ಪೂರಕವಾಗಿವೆ. ಮಕ್ಕಳು ತಮ್ಮ ಆಸಕ್ತಿದಾಯಕ ಕಲೆಯನ್ನು ಮೈಗೂಡಿಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಬಿಇಒ ಚನ್ನಬಸಪ್ಪ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರತಿಭಾ ಕಾರಂಜಿ ನೋಡಲ್ ಅಧಿಕಾರಿಗಳಾದ ಕೆ.ಮಲ್ಲೇಶಪ್ಪ, ಕೆ.ಶಿವರಾಮ. ಜಬಿವುಲ್ಲಾ, ನಗೆಸಭೆ ಸದಸ್ಯರಾದ ರಾಬರ್ಟ್ ಲ್.ಎಸದ.ಆನಂದ, ರಮೇಶ ಗುಪ್ತಾ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಎ.ಎನ್.ಸುಧಾಕರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಕೆ.ಬಸವರಾಜ, ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಡಾ. ಅಕ್ಕಮಹಾದೇವಿ, ಪ್ರೌಢಶಾಲಾ ಶಾಲಾ ಸಹ ಶಿಕ್ಷಕರಸಂಘದ ಅಧ್ಯಕ್ಷ ಬಿ.ತಿಮ್ಮಪ್ಪ ಉಪಸ್ಥಿತರಿದ್ದರು.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.



# ಜಿಲ್ಲೆಯನ್ನು ಕ್ಷಯ ಮುಕ್ತವಾಗಿಸಲು ಸಹಕರಿಸಿ

**ಹಂಪಿ ಟೈಮ್ಸ್ ಹೊಸಪೇಟೆ**

2025ಕ್ಕೆ ಕ್ಷಯಮುಕ್ತ ಭಾರತ' ದಿಟ್ಟ ಸಕಲ್ಪದೊಂದಿಗೆ ಆರೋಗ್ಯ ಇಲಾಖೆಯಿಂದ ನ.15 ರಿಂದ ಡಿಸೆಂಬರ್ 02ರ ವರೆಗೆ ಹಮ್ಮಿಕೊಳ್ಳಲಾದ ಸಕ್ರಿಯ ಕ್ಷಯರೋಗ ಪತ್ತೆ ಹಾಗೂ ಚಿಕಿತ್ಸಾ ಆಂದೋಲನ ಕಾರ್ಯಕ್ರಮದ ಪೋಸ್ಟರ್‌ಗಳನ್ನು ಇತ್ತೀಚೆಗೆ ಜಿಲ್ಲಾಧಿಕಾರಿ ಬಿಡುಗಡೆಗೊಳಿಸಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಮಾತನಾಡಿ, ಈ ಆಂದೋಲನಾ ಕಾರ್ಯಕ್ರಮದಲ್ಲಿ ತರಬೇತಿ ಹೊಂದಿರುವ ಆರೋಗ್ಯ ಕಾರ್ಯಕರ್ತರನ್ನೊಳಗೊಂಡ ತಂಡಗಳೊಂದಿಗೆ ಮನೆಮನೆ ಭೇಟಿ ಮೂಲಕ ಜನರ ತಪಾಸಣೆಗೆ ಕ್ರಮ ಕೈಗೊಳ್ಳಬೇಕು ಕ್ಷಯರೋಗ ಪತ್ತೆ ಹಚ್ಚುವಿಕೆ ಚಿಕಿತ್ಸೆ ನೀಡುವುದು ಹಾಗೂ ಕ್ಷಯರೋಗದ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ತಂಡಗಳು ಕಾರ್ಯಪ್ರವರ್ತರಾಗಿ ಕಾರ್ಯನಿರ್ವಹಿಸಬೇಕು. ಜಿಲ್ಲೆಯನ್ನು ಕ್ಷಯ ಮುಕ್ತವನ್ನಾಗಿಸಲು ಎಲ್ಲರೂ ಸಹಕರಿಸಬೇಕು ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಲ್.ಆರ್.ಶಂಕರ್ ನಾಯ್ಕ್, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಜಗದೀಶ ಪಾಡ್ಕೆ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಷಣ್ಮುಖ ನಾಯ್ಕ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ ದೊಡ್ಡಮನಿ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ರಾಧಿಕಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.













## ತುಂಗಭದ್ರಾ ನೀರಿನ ಮಟ್ಟ



| ಶನಿವಾರ : 11-11-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1602.83 ಅಡಿ |
| ಒಳ ಹರಿವು | 6465 ಕ್ಯುಸೆಕ್ |
| ಹೊರ ಹರಿವು | 8512 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 25.402 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.79 ಅಡಿ |
| ಒಳ ಹರಿವು | 4003 ಕ್ಯುಸೆಕ್ |
| ಹೊರ ಹರಿವು | 10033 ಕ್ಯುಸೆಕ್ |
| ಸಾಮರ್ಥ್ಯ | 100.953 ಟಿಎಂಸಿ |




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA










Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA